**ಅತೀ ಜರೂರು**

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 05.03.2019

**ಸುತ್ತೋಲೆ**

**ವಿಷಯ** : ಮತದಾರ ಸಾಕ್ಷರತಾ ಸಂಘಗಳ ಸಂಚಾಲಕರ ತರಬೇತಿ ಕುರಿತು.

**ಉಲ್ಲೇಖ** : 1) ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18 ದಿನಾಂಕ: 21-02-2019
2) ಮುಖ್ಯ ಚುನಾವಣಾಧಿಕಾರಿಗಳ ಪತ್ರ ಸಂಖ್ಯೆ: ಸಿಆಸುಇ/111/ಚುಮಪ/ಅಮುಚುಅ-1/2018 ದಿನಾಂಕ:27-02-2019

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಮತದಾರರ ಸಾಕ್ಷರತಾ ಸಂಘಗಳನ್ನು (Electoral Literacy Clubs) ಗಳನ್ನು ರಚಿಸಿ ಪ್ರತಿ ಸಂಸ್ಥೆಯಿಂದ ಚುನಾವಣೆ ಪ್ರಕ್ರಿಯೆಯ ಅನುಭವವುಳ್ಳ ಇಬ್ಬರು ಉಪನ್ಯಾಸಕರನ್ನು ಸಂಚಾಲಕರನ್ನಾಗಿ (Conveners) ನೇಮಿಸಿಸಲು ಈಗಾಗಲೇ ಆದೇಶಿಸಲಾಗಿದೆ. ಸದರಿ ಸಂಚಾಲಕರಿಗೆ ಉಲ್ಲೇಖ (2) ರಂತೆ ಎರಡು ದಿನಗಳ (6 ಅವಧಿಗಳಲ್ಲಿ) ತರಬೇತಿ ಕಾರ್ಯಕ್ರಮವನ್ನು ದಿನಾಂಕ:11-03-2019 ರಿಂದ 18-03-2019 ರ ವರೆಗೆ ಆಯಾ ತಾಲ್ಲೂಕಿನ ಬಿ.ಆರ್.ಸಿ ಅಥವಾ ಇತರೆ ಆಯ್ದ ಕೇಂದ್ರದಲ್ಲಿ ಆಯೋಜಿಸಲಾಗಿರುತ್ತದೆ. ತರಬೇತಿ ನಂತರ ಸಂಪನ್ಮೂಲ ಮಾರ್ಗ ಸೂಚಿಯ ಕಿಟ್‌ಅನ್ನು ಪಡೆದು ತರಬೇತಿಯಲ್ಲಿ ತಿಳಿಸಿದಂತೆ ತಮ್ಮ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರ ಲಗತ್ತಿಸಲಾಗಿದೆ.

ನಿರ್ದೇಶಕರು

**ಇವರಿಗೆ,**

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ.

**ಪ್ರತಿ.**

1. ರಾಜ್ಯ ಚುನಾವಣಾಧಿಕಾರಿಗಳು, ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-01- ಮಾಹಿತಿಗಾಗಿ ಸಲ್ಲಿಸಿದೆ.
2. ಇ-ಆಡಳಿತ ಶಾಖೆಗೆ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು ರವಾನಿಸಿದೆ.
3. ಕಛೇರಿ ಕಡತಕ್ಕೆ.

# ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

ಸಂಖ್ಯೆ: ಸಿಆಸುಇ/111/ಚುಮುಪ/ಅಮುಚುಅ-1/2018 ದಿನಾಂಕ: 27-02-2019

## ಸುತ್ತೋಲೆ

ವಿಷಯ: ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಮತದಾರ ಸಾಕ್ಷರತಾ ಕ್ಲಬ್‌ಗಳ ಸಂಚಾಲಕರಿಗೆ ತರಬೇತಿಯನ್ನು ಆಯೋಜಿಸುವ ಕುರಿತು.

ಉಲ್ಲೇಖ : ಈ ಕಛೇರಿ ಸಮಸಂಖ್ಯೆ ಪತ್ರದ ದಿನಾಂಕ 14-12-2018 ಮತ್ತು ಸುತ್ತೋಲೆ ದಿನಾಂಕ18-02-2019

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ, ರಾಜ್ಯದ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ 'ಮತದಾರ ಸಾಕ್ಷರತಾ ಸಂಘ (Electoral Literacy Clubs) ಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಪೂರಕವಾಗಿ ಚುನಾವಣಾ ಆಯೋಗದ ವತಿಯಿಂದ ಈಗಾಗಲೇ ರಾಜ್ಯ, ವಿಭಾಗ ಮತ್ತು ಜಿಲ್ಲಾ ಹಂತಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ 2 ದಿನಗಳ ತರಬೇತಿ ಆಯೋಜಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಶಾಲೆ/ಸಂಸ್ಥಾ ಹಂತದ ಇಎಲ್‌ಸಿ ಸಂಚಾಲಕರಿಗೆ 2 ದಿನಗಳ ತರಬೇತಿ ಆಯೋಜಿಸುವುದು ಮತ್ತು ಚುನಾವಣಾ ಜಾಗೃತಿ ಸಂಘ/ Chunavana Jagruthi Clubs (ಚುನಾವಣಾ ಪಾಠಶಾಲೆ) ಹಂತದ ಕಾರ್ಯಕ್ರಮ ಅನುಷ್ಠಾಧಿಕಾರಿಗಳಾದ ಮತಗಟ್ಟೆ ಅಧಿಕಾರಿ (Booth Level Officers/BLOs) ಗಳಿಗೆ ಒಂದು ದಿನದ ತರಬೇತಿಯನ್ನು ಆಯೋಜಿಸುವುದು ಅಗತ್ಯವಿರುತ್ತದೆ. ಈ ಹಿನ್ನಲೆಯಲ್ಲಿ, ಉಲ್ಲೇಖಗಳ ಮಾರ್ಗಸೂಚಿಯಲ್ಲಿ ವಿವರಿಸಿರುವಂತೆ ಆಯ್ಕೆ ಮಾಡಲಾದ ಇಎಲ್‌ಸಿ ಸಂಚಾಲಕರಿಗೆ ಕೆಳಕಂಡ ಮಾರ್ಗಸೂಚಿಯನ್ವಯ ಆಯೋಜಿಸಲು ಸೂಚಿಸಿದೆ.

1. ಮಾಸ್ಟರ್ ಸಂಪನ್ಮೂಲ ವ್ಯಕ್ತಿಗಳ (MTs) ತರಬೇತಿ ;

<u>ಜಿಲ್ಲಾ ಹಂತದಲ್ಲಿ ನೀಡಲಾಗಿರುವ ಮಾಸ್ಟರ್ ಸಂಪನ್ಮೂಲ ವ್ಯಕ್ತಿಗಳ (MTs) ತರಬೇತಿ ಅನುದಾನದ ಲಭ್ಯತೆ ಮತ್ತು ಹಂಚಿಕೆ:</u>

ಅ) 22-23 ಫೆಬ್ರವರಿ 2019 ರಂದು ಬ್ಲಾಕ್ ಮಟ್ಟದ ಮಾಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ ಜಿಲ್ಲಾ ಹಂತದಲ್ಲಿ ತರಬೇತಿ ಆಯೋಜಿಸಲಾಗಿರುವುದು ಸರಿಯಷ್ಟೆ. ಇದಕ್ಕೆ ಸಂಬಂಧಿಸಿದಂತೆ ಅನುಬಂಧ -1 ರಲ್ಲಿ ಸೂಚಿಸಿರುವಂತೆ 2 ದಿನಗಳ ತರಬೇತಿ ಅವಧಿಗೆ ಪ್ರತಿಯೊಬ್ಬರಿಗೆ ತಲಾ ರೂ.200/=ರಂತೆ ಪ್ರಯಾಣಭತ್ಯೆ/ಸ್ಥಳೀಯ ಭತ್ಯೆಯನ್ನು ನೀಡುವುದು.

ಆ) ಈ ಮೇಲ್ಕಂಡ ತರಬೇತಿಯಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಕಾಫೀ/ಟೀ/ಉಪಹಾರ ಮತ್ತು ಇತರೆ ವೆಚ್ಚಗಳಿಗೆ ದಿನವೊಂದಕ್ಕೆ ತಲಾ ರೂ 200/=ರಂತೆ ಭರಿಸುವುದು.

ಇ) ಈ ತರಬೇತಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಸ್ಟೇಷನರಿ ಹಾಗೂ ಸಂಪನ್ಮೂಲ ಸಾಹಿತ್ಯದ ಪ್ರತಿಗಳ ವೆಚ್ಚಕ್ಕೆ ಪ್ರತಿ ಜಿಲ್ಲೆಗೆ ಗರಿಷ್ಠ ರೂ.5000/ಮೀರದಂತೆ ಭರಿಸುವುದು.

ಈ) ಅನುಬಂಧ 1ರ ಕಾಲಂ 10ರಲ್ಲಿ ಜಿಲ್ಲಾವಾರು ಅನುದಾನದ ಹಂಚಿಕೆಯ ವಿವರಗಳನ್ನು ನೀಡಲಾಗಿದೆ.

A.S.S. / ADO / Asst. Dir
Sri A.V. Srinivasmurthy
Nodal Officer (Elections)

2. ಇಎಲ್‌ಸಿ ಸಂಚಾಲಕರ ತರಬೇತಿ ಕಾರ್ಯಕ್ರಮ:

ಇಎಲ್‌ಸಿ ಸಂಚಾಲಕರ ಎರಡು ದಿನಗಳ ತರಬೇತಿ ಕಾರ್ಯಕ್ರಮದ ಮಾರ್ಗಸೂಚಿ ಮತ್ತು ಅನುದಾನದ ವಿವರಗಳು:

i) ತರಬೇತಿ ಕಾರ್ಯಕ್ರಮದ ಅವಧಿ: 11-03-2019 ರಿಂದ 18-03-2019 ರವರೆಗೆ

ii) ತರಬೇತಿಯ ದಿನಗಳು: 2 ದಿನಗಳು (6 ಅವಧಿಗಳು)

iii) ತರಬೇತಿಯ ಸ್ಥಳ: ಆಯಾ ತಾಲ್ಲೂಕಿನ ಬಿಆರ್‌ಸಿ ಅಥವಾ ಇತರ ಆಯ್ದ ಕೇಂದ್ರ

iv) ತರಬೇತಿ ತಂಡಗಳ ರಚನೆ: ಪ್ರತಿ ತಂಡಕ್ಕೆ 50 ರಿಂದ 60 ಶಿಬಿರಾರ್ಥಿಗಳಂತೆ ತಂಡಗಳನ್ನು ರಚಿಸಿ, ಲಭ್ಯವಿರುವ ಸಂಪನ್ಮೂಲ ವ್ಯಕ್ತಿಗಳ ಮೂಲಕ ತರಬೇತಿಯನ್ನು ಆಯೋಜಿಸುವುದು. (ಸಣ್ಣ ತಾಲ್ಲೂಕುಗಳಿದ್ದಲ್ಲಿ ಅಥವಾ ಶಿಬಿರಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಡೆಗಳಲ್ಲಿ ಅಕ್ಕ ಪಕ್ಕದ ತಾಲ್ಲೂಕುಗಳು ಸೇರಿ ಒಟ್ಟಾಗಿ ತರಬೇತಿ ಆಯೋಜಿಸಬಹುದು.)

v) ಅನುದಾನದ ಲಭ್ಯತೆ ಮತ್ತು ಹಂಚಿಕೆಯ ವಿವರ: ಅನುಬಂಧ 2ರಲ್ಲಿ ಅಂಶವಾರು ಪೂರ್ಣ ವಿವರಗಳನ್ನು ನೀಡಲಾಗಿದೆ.

- ತರಬೇತಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಿಗೆ (ಡಿಎಲ್‌ಎಂಟಿ ಮತ್ತು ಬಿಎಲ್‌ಎಂಟಿಗಳು) ತಲಾ ತರಬೇತಿಯ ಅವಧಿಯ ಎರಡು ದಿನಗಳಿಗೆ ಒಟ್ಟು ರೂ 400 ರಂತೆ ಸಂಭಾವನೆಯನ್ನು ಭರಿಸುವುದು.
- ಈ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ನೀಡಲು ಅವಶ್ಯವಿರುವ ಸ್ಟೇಷನರಿ ಸಾಮಗ್ರಿ ಮತ್ತು ಸಾಹಿತ್ಯದ ಪ್ರತಿಗಳು ಇನ್ನಿತರ ಸಾಮಾಗ್ರಿಗಳ ವೆಚ್ಚಕ್ಕಾಗಿ ಪ್ರತಿ ಬ್ಲಾಕ್‌ಗೆ ರೂ 2000/ಗಳಂತೆ ಭರಿಸತಕ್ಕದ್ದು.

vi) ತರಬೇತಿ ಸಾಹಿತ್ಯ ಸಂಪನ್ಮೂಲ: ಈ ತರಬೇತಿಗಾಗಿ ಚುನಾವಣಾ ಆಯೋಗದ ವತಿಯಿಂದ ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯವನ್ನು ತರಗತಿವಾರು ಮತ್ತು ವಿಷಯವಾರು ಒದಗಿಸಲಾಗುತ್ತಿದ್ದು, ಮಾರ್ಗಸೂಚಿ ಮತ್ತು ತರಬೇತಿ ವೇಳಾಪಟ್ಟಿಯನ್ವಯ ಅತರಬೇತಿಯನ್ನು ಆಯೋಜಿಸಿ, ನೀಡುವುದು. ಈ ಸಂಪನ್ಮೂಲ ಮಾರ್ಗಸೂಚಿಯ ಕಿಟ್ ಅನ್ನು ಪ್ರತಿ ಇಎಲ್‌ಸಿ ಕೇಂದ್ರಕ್ಕೆ ಒಂದರಂತೆ ವಿತರಿಸುವುದು.

3. ಬಿ.ಎಲ್.ಓ.ಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮ:

ಚುನಾವಣಾ ಜಾಗೃತಿ ಸಂಘಗಳ ನೋಡಲ್ ಅಧಿಕಾರಿಗಳಾದ ಬಿ.ಎಲ್.ಓ.ಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮದ ಮಾರ್ಗಸೂಚಿ ಮತ್ತು ಅನುದಾನದ ವಿವರಗಳು:

i) ಚುನಾವಣಾ ಆಯೋಗದ ನಿರ್ದೇಶನದಂತೆ, ಔಪಚಾರಿಕ ವ್ಯವಸ್ಥೆಯಿಂದ ಹೊರಗುಳಿದಿರುವ ಯುವ ಮತ್ತು ನೂತನ ಮತದಾರರಲ್ಲಿ ಚುನಾವಣೆ ಮತ್ತು ಮತದಾನದ ಪ್ರಕ್ರಿಯೆಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಮತಗಟ್ಟೆ ಹಂತಗಳಲ್ಲಿ ಚುನಾವಣಾ ಜಾಗೃತಿ ಸಂಘ (ಚುನಾವಣಾ ಪಾಠಶಾಲೆ)ಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಸಂಘಗಳ ನೋಡಲ್ ಅಧಿಕಾರಿಗಳಾದ ಬಿಎಲ್‌ಓಗಳಿಗೆ (Booth Level Officers) ಒಂದು ದಿನದ ತರಬೇತಿಯನ್ನು ಆಯಾ ಬ್ಲಾಕ್/ ಹೋಬಳಿ ಹಂತಗಳಲ್ಲಿ ಈಗಾಗಲೇ ತರಬೇತಿಯನ್ನು ಪಡೆದಿರುವ ಇಎಲ್‌ಸಿಯ ಡಿಎಲ್‌ಎಂಟಿ/ ಬಿಎಲ್‌ಎಂಟಿಗಳ ಮೂಲಕ ಆಯೋಜಿಸಲು ಕ್ರಮವಹಿಸುವುದು.

ii) ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಶಿಭಿರಾರ್ಥಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಕಾಫಿ/ಟೀ/ಉಪಾಹಾರ ಹಾಗೂ ಇತರ ವ್ಯವಸ್ಥೆಗಾಗಿ ತಲಾ ರೂ.100/=ರಂತೆ ಭರಿಸುವುದು.

iii) ಅನುಬಂಧ-3 ರಲ್ಲಿ ಜಿಲ್ಲಾವಾರು ಅನುದಾನದ ಹಂಚಿಕೆಯ ವಿವರಗಳನ್ನು ನೀಡಿದೆ.

iv) ಈ ಕಾರ್ಯಕ್ರಮಕ್ಕೆ ಚುನಾವಣಾ ಆಯೋಗದಿದಂದ ಒದಗಿಸಲಾಗಿರುವ ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯವನ್ನು ಬಳಸುವುದು ಹಾಗೂ ಪ್ರತಿ ಕೇಂದ್ರಕ್ಕೆ ಸೂಚಿತ ಸಾಹಿತ್ಯ ಸಾಮಗ್ರಿಗಳನ್ನು ವಿತರಿಸಲು ಕ್ರಮವಹಿಸುವುದು.

ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಈ ಪತ್ರದೊಂದಿಗೆ ಇಲಾಖೆಯ ವಿಭಾಗವಾರು ನೋಡಲ್ ಅಧಿಕಾರಿಗಳು, ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳು (ಎಸ್.ಎಲ್.ಎಂ.ಟಿ), ಜಿಲ್ಲಾ ಮಾಸ್ಟರ್ ತರಬೇತಿ ಸಂಪನ್ಮೂಲ ವ್ಯಕ್ತಿಗಳು (ಡಿ.ಎಲ್.ಎಂ.ಟಿ) ಮತ್ತು ಮಾಸ್ಟರ್ ಟ್ರೈನರ್ಸ್ (ಎಂ.ಟಿ.) ಪಟ್ಟಿಯನ್ನು ಲಗತ್ತಿಸಿದ್ದು, ಆಯಾ ವ್ಯಾಪ್ತಿಯ ಸಂಪನ್ಮೂಲ ವ್ಯಕ್ತಿಗಳ ಸಹಕಾರದೊಂದಿಗೆ, ಕ್ರಮಕೈಗೊಂಡು ಪರಿಣಾಮಕಾರಿ ಉಸ್ತುವಾರಿಯೊಂದಿಗೆ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸೂಚಿಸಿದೆ.

(ಆ.ವಿ ಸೂರ್ಯಸೇನ್, ಭಾ.ಅ.ಸೇ)

ಜಂಟಿ ಮುಖ್ಯ ಚುನಾವಣಾಧಿಕಾರಿಗಳು – 2

ಸಿಆಸುಇ (ಚುನಾವಣೆಗಳು)

ಪ್ರತಿಯನ್ನು:

1. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಆಯುಕ್ತರು ಬಿ.ಬಿ.ಎಂ.ಪಿ ಬೆಂಗಳೂರು
2. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು
3. ಎಲ್ಲಾ ಜಿಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸ್ವೀಪ್ ನೋಡಲ್ ಅಧಿಕಾರಿಗಳು
4. ನಿರ್ದೇಶಕರು ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಡಿ.ಎಸ್.ಇ.ಆರ್.ಟಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು
5. ಸಹ ನಿರ್ದೇಶಕರು, (ಆಡಳಿತ) ಪದವಿ ಪೂರ್ವ ಶಿಕ್ಷಣ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು
6. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ
7. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಮತ್ತು ಉಪ ನಿರ್ದೇಶಕರು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ